ಶ್ರೀ ಎ.ಲಕ್ಷ್ಮೀಸಾಗರ್.—೭ನೇ ಪಂಚವಾರ್ಷಿಕ ಯೋಜನೆಯಲ್ಲಿ ತುರಿಯಾ ಪಟ್ಟಣದ ನೀರು ಸರಬರಾಜು ಯೋಜನೆಯನ್ನು ಸೇರಿಸಲಿಕ್ಕೆ ಸಂಬಂಧಪಟ್ಟ ದಾಖಲೆಗಳು, ನಕ್ಷೆಗಳು, ತಯಾರಾಗುತ್ತಿದೆ. ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಬಳ್ಳಾರಿ ನಗರದ ೨ನೇ ಘಟ್ಟದ ನೀರು ಸರಬರಾಜು ಯೋಜನೆ

೫೬೭. **ಶ್ರೀ ಎಂ. ರಾಮಪ್ಪ** (ಬಳ್ಳಾರಿ) —.ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ನಗರದ ನೀರು ಸರಬರಾಜು ಯೋಜನೆಯ ಎರಡನೇ ಹಂತಕ್ಕೆ ಮಂಜೂರಾದ ಒಟ್ಟು ಹಣ ಮತ್ತು ಈ ಕೆಲಸಕ್ಕಾಗಿ ಒದಗಿಸಲಾದ ಹಣ ?

ಆ) ಈ ಯೋಜನೆಯ ಕೆಲಸಗಳನ್ನು ಪ್ರಸಕ್ತ ವರ್ಷದಲ್ಲಿ ಮುಗಿಸಲಾಗುವುದೇ ಇಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಮಂಜೂರಾದ ಅಂದಾಜು ಪಟ್ಟಿ ೬೪೨.೦೦ಲಕ್ಷರೂ. ಈವರೆಗೆ ಒದಗಿಸಲಾದ ಹಣ೨೧೧.೮೮ ಲಕ್ಷರೂಗಳು.

ಆ) ಇಲ್ಲ

ಕಾರಣಗಳು:—ಈ ಕೆಳಕಂಡಂತಿದೆ.

೧ ಕಚ್ಚಾ ನೀರು ಗುರುತ್ವಾಕರ್ಷಣ ಕೊಳವೆ ಮಾರ್ಗ ಮತ್ತು ಶುದ್ಧೀಕರಣ ಘಟಕಗಳಿಗೆ ಬೇಕಾಗುವ ಭೂಸ್ವಾಧೀನವು ಡಿಸೆಂಬರ್ ೮೬ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮಂತ್ತು ಒಳಚರಂಡಿ ಮಂಡಳಿಗೆ ದೊರಕಿತು.

೨ ವಾಯು ಪಡೆಯವರು ಒಡ್ಡಿದ ಸಮಸ್ಯೆಗಳು ಮತ್ತು ಆಡಚಣೆಗಳಿಂದಾಗಿ ಗುರುತ್ವಾಕರ್ಷಣ ಕೊಳವೆ ಮಾರ್ಗದ ಪಥವನ್ನು ಬದಲಾಯಿಸಬೇಕಾಗಿ ಬಂತು.

೩ ಗುರುತ್ವಾಕರ್ಷಣ ಕೊಳವೆ ಮಾರ್ಗವು ಎರಡು ರೈಲ್ವೆ ಮಾರ್ಗಗಳನ್ನು ದಾಟಬೇಕಾಗುತ್ತದೆ. ಅದ್ದರಿಂದ ಈ ಬಗ್ಗೆ ರೈಲ್ವೆ ಅಧಿಕಾರಿಗಳಿಂದ ಅನುಮತಿ ಪಡೆಯಬೇಕಾಗಿದೆ.

೪ ತುಂಗಭದ್ರಾ ಕಾಲುವೆಯನ್ನು ಮುಚ್ಚಿದ ಅವಧಿಯಲ್ಲಿ ಬೇಕಾಗುವ ನೀರನ್ನು ಶೇಖರಿಸಲು ಉಪಯೋಗಿಸಲು ಉದ್ದೇಶಿಸಲಾದ ಅಲ್ಲಿ ಪುರಕೆರೆಯ ಸ್ವಾಧೀನವು ಸಣ್ಣ ನೀರಾವರಿ ಇಲಾಖೆ ಇಂದ ಇನ್ನು ಮಂಡಲಿಗೆ ದೊರಕಿರುವುದಿಲ್ಲ.

೫ ಅಗತ್ಯವಾದ ಹಣ

(ಶ್ರೀ ಎಂ. ರಾಮಪ್ಪನವರ ಪರವಾಗಿ ಶ್ರೀ ಬಿ. ಸ್ವಾಮಿರಾವ್ ಅವರು ಕೇಳಿದರು)

ಶ್ರೀ ಬಿ. ಸ್ವಾಮಿರಾವ್.—ಗುರುತ್ವಾಕರ್ಷಣೆ ಕೊಳವೆ ಮಾರ್ಗ ಎಂದರೆ ಏನು ನನಗೆ ಅರ್ಥವಾಗಲಿಲ್ಲ. ಇನ್ನು ೫ನೇ ಉತ್ತರದಲ್ಲಿ ಅಗತ್ಯವಾದ ಹಣ ಎಂದು ಹೇಳಿದ್ದೀರಿ. ಆ ರೀತಿ ಹೇಳಿದರೆ ಹಣ ಇದೆ ಎಂತಲೋ ಅಥವಾ ಹಣ ಇಲ್ಲ ಎಂದು ಅರ್ಥವೋ?

ಶ್ರೀ ಎ. ಲಕ್ಷ್ಮೀಸಾಗರ್.—ಹಣದ ತೊಂದರೆ ಇದೆ. ಇನ್ನು ಗುರುತ್ವಾಕರ್ಷಣೆ ಎಂದರೆ ಗ್ರಾವಿಟೇಷನ್.

ಶ್ರೀ ಬಿ. ಸ್ವಾಮಿರಾವ್.—ಈ ಕೆಲಸವನ್ನು ಯಾವಾಗ ಪೂರೈಸುತ್ತೀರಿ?

ಶ್ರೀ ಎ. ಲಕ್ಷ್ಮೀಸಾಗರ್,—ನೀರಿನ ಕೊರತೆ ಇದೆ. ಆದಷ್ಟು ಬೇಗನೆ ಇದನ್ನು ಮುಗಿಸಲಿಕ್ಕೆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತೇವೆ.

ಶ್ರೀ ಬಿ ಸ್ವಾಮಿರಾವ್.—ಎಲ್ಲಾ ಪ್ರಶ್ನೆಗಳಿಗೂ ಆದಷ್ಟು ಬೇಗ ಎಂದು ಹೇಳುತ್ತೀರಿ, ಆದರ ಅರ್ಥ ಏನಂ ಎಂದಂ ಹೇಳುತ್ತೀರಾ ?

ಅಧ್ಯಕ್ಷರು.—ಅದಕ್ಕೆ ಒಂದು ಅಷ್ಯೂರೆನ್ಸ್ ಕಮಿಟಿ ಇದೆ, ಅದರಲ್ಲಿ ನೀವು ಸಹ ಮೆಂಬರ್ ಇದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉಪಯೋಗಿಸುವ ಭಾಷೆಯಲ್ಲಿ ಏನು ಅರ್ಥ ಇದೆಯೋ ಆದೇ ಅರ್ಥವನ್ನು ಕೊಡಂತ್ತದೆ.

ಶ್ರೀ ಯು. ಭೂಪತಿ.—ಸ್ವಾಮಿ, ಬಳ್ಳಾರಿ ಪಟ್ಟಣಕ್ಕೆ ನೀರನ್ನು ಸರಬರಾಜು ಮಾಡಲು ವಿಳಂಬವಾಗಿರುವುದಕ್ಕೆ ಅನೇಕ ಕಾರಣಗಳನ್ನು ಕೊಟ್ಟಿದ್ದೀರಿ. ಗುರುತ್ವಾಕರ್ಷಣೆ ಕೊಳವೆ ಮಾರ್ಗ ಮತ್ತು ಶುದ್ಧೀಕರಣ ಘಟಕಗಳಿಗೆ ಬೇಕಾಗುವ ಭೂಸ್ವಾಧೀನ ಕಾರ್ಯ ತಡವಾಯಿತು. ವಾಯು ಪಡೆಯವರು ಒಡ್ಡಿದ ಸಮಸ್ಯೆಗಳು ಮತ್ತು ಆಡಚಣೆಗಳಿಂದಾಗಿ ತಡವಾಯಿತು, ಎರಡು ರೈಲ್ವೇ ಮಾರ್ಗಗಳನ್ನು ದಾಟಬೇಕಾಗಿರುವುದರಿಂದ ಅವರಿಂದ ಅನುಮತಿ ಪಡೆದುಕೊಳ್ಳಬೇಕಾಗಿದೆ, ತುಂಗಭದ್ರಾ ಕಾಲುವೆಯನ್ನು ಮುಚ್ಚಿದ ಅವಧಿಯಲ್ಲಿ ಬೇಕಾಗುವ ನೀರನ್ನು ಶೇಖರಿಸಿ ಉಪಯೋಗಿಸಲು ಉದ್ದೇಶಿಸಲಾದ ಅಲ್ಲಿಪುರ ಕೆರೆಯ ಸ್ವಾಧೀನವು ಸಣ್ಣ ನೀರಾವರಿ ಇಲಾಖೆಯಿಂದ ಇನ್ನೂ ಮಂಡಲಿಗೆ ದೊರಕಿಲ್ಲದ ಕಾರಣದಿಂದ ತಡವಾಗಿದೆ ಎಂದು ಹೇಳಿದ್ದೀರಿ. ಇದೆಲ್ಲಾ ನಿಮಗೆ ಮೊದಲೇ ಗೊತ್ತಿರಲಿಲ್ಲವೆ? ಆಗ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಂಚಿಪ್ರಯತ್ನ ಮಾಡಿರಲಿಲ್ಲವೆ? ಆ ಪ್ರಯತ್ನಗಳು ಈಗ ಯಾವ ಹಂತದಲ್ಲಿವೆ ಎಂಬುದನ್ನು ಹೇಳುತ್ತೀರಾ?

ಶ್ರೀ, ಎ. ಲಕ್ಷ್ಮೀಸಾಗರ್.—ಯಾವ ಕೆಲಸವೂ ಅಷ್ಟು ಸುಲಭವಾಗಿ ಆಗುವುದಿಲ್ಲ. ನಾವು ಮೊದಲು ಕೆಲಸವನ್ನು ಪ್ರಾರಂಭ ಮಾಡಿ ನಂತರ ಬರತಕ್ಕ ಸಮಸ್ಯೆಗಳ ಬಗ್ಗೆ ಸ್ವಲ್ಪಮಟ್ಟಿನ ಒತ್ತಾಯವನ್ನು ಮಾಡಿದರೆ ಆ ಕೆಲಸ ಆಗುತ್ತದೆ. ಈಗಾಗಲೇ ನಾನು ಹೇಳಿದ ಕೆಲವು ಕಾರಣಗಳಿಂದ ಸ್ವಲ್ಪ ವಂಟ್ಟಿವ ವಿಳಂಬವಾಗಿದೆ. ಆದಷ್ಟುಬೇಗ ಇದನ್ನು ಕಾರ್ಯಗತ ಮಾಡಿಸಿಕೊಡುತ್ತೇನೆ.

ಬೆಂಗಳೂರು ಪ್ರಾಧಿಕಾರ ನಿವೇಶನಗಳನ್ನು ಹಂಚಿರುವ ಬಗ್ಗೆ.

೪೬೮ ಶ್ರೀ ಚಂದ್ರಕಾಂತ ಜಿ. ಬೆಲ್ಲದ್. (ಧಾರವಾಡ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧ ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ರಲ್ಲಿ ಹಂಚಿರುವ ನಿವೇಶನಗಳ ಸಂಖ್ಯೆ, ಎಷ್ಟು ?

೨ ನಿವೇಶನಗಳನ್ನು ಹಂಚಲು ಅನುಸರಿಸಲಾಗುತ್ತಿರುವ ವಿಧಾನಗಳೇನು ?

೩ ಈಗ ಅನುಸರಿಸುತ್ತಿರುವ ವಿಧಾನಗಳಿಂದ ಕನ್ನಡಿಗರಿಗೆ ನ್ಯಾಯ ದೊರಕಿದೆಯೇ ?

೪ ೧೯೮೭-೮೮ನೇ ಸಾಲಿನಲ್ಲಿ ಹಂಚಬೇಕಾಗಿರುವ ನಿವೇಶನಗಳು ಕರ್ನಾಟಕ ಜನತೆಗೆ ಸಿಗುವ ಬಗ್ಗೆ ಸರ್ಕಾರದವರು ಯಾವ ರೀತಿಯ ಯೋಜನೆಯನ್ನು ರೂಪಿಸಿದ್ದಾರೆ ?

೫ ಕರ್ನಾಟಕದ ಹೊರಗಿನವರು ಹೆಚ್ಚಿನ ಸಂಖ್ಯೆಯಲ್ಲಿತಪ್ಪು ದಾಖಲೆಗಳನ್ನು ನೀಡಿ ನಿವೇಶನಗಳನು ಪಡೆಯುತ್ತಿರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೬ ಹಾಗಿದ್ದಲ್ಲಿ ತಪ್ಪಿತಸ್ಥರ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ? ಮತ್ತು ಕರ್ನಾಟಕದ ಜನತೆಗೆ ನ್ಯಾಯ ದೊರಕಿಸಿಕೊಡಲಾಗುವುದೇ ?